# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1139
ಉತ್ತರಿಸಬೇಕಾದ ದಿನಾಂಕ : 25.07.2024
ಸದಸ್ಯರ ಹೆಸರು : ಶ್ರೀ ಮಧು ಜಿ.ಮಾದೇಗೌಡ(ಪದವೀಧರರ ಕ್ಷೇತ್ರ)
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಯುವಕ ಸಂಘ ಹಾಗೂ ಯುವತಿ ಮಂಡಳಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಒಟ್ಟು 4778 ಯುವಕ/ಯುವತಿ ಮಂಡಲಗಳು ಇದ್ದು, ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಿದೆ. |
| ಆ) | ಈ ಪೈಕಿ ನೊಂದಣಿ ಆಗಿರುವ, ಕಾರ್ಯನಿರ್ವಹಣೆ ಮಾಡುತ್ತಿರುವ ಯುವಕ ಸಂಘ ಹಾಗೂ ಯುವತಿ ಮಂಡಳಿಗಳ ಸಂಖ್ಯೆ ಎಷ್ಟು; | ಈ ಪೈಕಿ 1330 ಯುವಕ ಸಂಘ ಹಾಗೂ ಯುವತಿ ಮಂಡಲಗಳು ಜಿಲ್ಲೆಗಳ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. |
| ಇ) | ಸರ್ಕಾರದಿಂದ ಯುವಕ ಸಂಘ ಹಾಗೂ ಯುವತಿ ಮಂಡಳಿಗಳಿಗೆ ಯಾವ ರೀತಿಯ ಪ್ರೋತ್ಸಾಹ ನೀಡಲಾಗುತ್ತಿದೆ; ವಾರ್ಷಿಕ ಎಷ್ಟು ಅನುದಾನ ನೀಡಲಾಗುತ್ತಿದೆ; | ಗ್ರಾಮದಲ್ಲಿನ ಯುವಜನರು ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ಇಲಾಖೆಯು ಯುವಕ ಸಂಘ/ಯುವತಿ ಮಂಡಲಗಳಿಗೆ ಯುವ ಚೈತನ್ಯ ಯೋಜನೆಯಡಿ ತಲಾ ರೂ. 40,000/- ದಂತೆ ಕ್ರೀಡಾ ಕಿಟ್ ಗಳನ್ನು ನೀಡುವ ಮೂಲಕ ಪ್ರೋತ್ಸಾಹಿಸಲಾಗುತ್ತದೆ. ರಾಜ್ಯದ ಯುವಕ ಸಂಘ ಮತ್ತು ಯುವತಿ ಮಂಡಲಗಳಿಗೆ ಇಲಾಖೆಯ ಜಿಲ್ಲಾ ಪಂಚಾಯತ್ ವಲಯಗಳಲ್ಲಿ ಅನುದಾನ ಲಭ್ಯತೆ ಅನುಸಾರ ಯುವಜನೋತ್ಸವ, ಸ್ವಾಮಿ ವಿವೇಕಾನಂದ ಜಯಂತಿ ಅಂಗವಾಗಿ ನಡೆಯುವ ಯುವ ಸಪ್ತಾಹ, ಯುವಜನ ಮೇಳ ಕಾರ್ಯಕ್ರಮಗಳನ್ನು ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಆಯೋಜನೆ ಮಾಡಲಾಗುತ್ತದೆ. ಕಳೆದ 2023-24 ನೇ ಸಾಲಿನಲ್ಲಿ ಯುವಕ ಸಂಘ ಮತ್ತು ಯುವತಿ ಮಂಡಲಗಳಿಗೆ ಬಿಡುಗಡೆ ಮಾಡಲು ಪ್ರತ್ಯೇಕ ಅನುದಾನ ನಿಗದಿಯಾಗಿರುವುದಿಲ್ಲ. |
| ಈ) | ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಸಂಸ್ಥೆಗಳಿಗೆ ಎಷ್ಟು ಅನುದಾನ ನೀಡಲಾಗಿದೆ; (ವರ್ಷವಾರು, ಸಂಸ್ಥೆಗಳವಾರು ಮಾಹಿತಿ ನೀಡುವುದು) | ಕಳೆದ 3 ವರ್ಷಗಳಲ್ಲಿ ಅಂದರೆ 2021-22, 2022-23 ಮತ್ತು 2023-24 ನೇ ಸಾಲುಗಳಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ರಾಜ್ಯ ವಲಯದಿಂದ ಯಾವುದೇ ಯುವಕ/ಯುವತಿ ಸಂಘಗಳಿಗೆ ಅನುದಾನ ಹಂಚಿಕೆಯಾಗಿರುವುದಿಲ್ಲ. |
| ಉ) | ಯುವಜನ ಮೇಳ ಮತ್ತು ಯುವಜನೋತ್ಸವ ಕಾಲಕಾಲಕ್ಕೆ ನಡೆಯದಿರಲು ಕಾರಣವೇನು? | ಯುವಜನ ಮೇಳ ಕಾರ್ಯಕ್ರಮವನ್ನು ಇಲಾಖೆ ವತಿಯಿಂದ ರಾಜ್ಯ ಮತ್ತು ಜಿಲ್ಲಾ ವಲಯಗಳಲ್ಲಿ ಅನುದಾನ ಲಭ್ಯತೆ ಆಧಾರದಲ್ಲಿ ಸಂಘಟಿಸಲಾಗುತ್ತದೆ. ಕೇಂದ್ರ ಯುವ ವ್ಯವಹಾರಗಳ ಇಲಾಖೆ ಕಾರ್ಯಾಲಯದ ಮಾರ್ಗಸೂಚಿಯಂತೆ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ ಅಂಗವಾಗಿ ಯುವಜನೋತ್ಸವ ಕಾರ್ಯಕ್ರಮವನ್ನು ಪ್ರತಿ ವರ್ಷ ಜಿಲ್ಲಾ, ರಾಜ್ಯ ಮಟ್ಟಗಳಲ್ಲಿ ಸಂಘಟಿಸಲಾಗುತ್ತದೆ ಮತ್ತು ರಾಷ್ಟ್ರ ಮಟ್ಟಕ್ಕೆ ಕರ್ನಾಟಕ ರಾಜ್ಯದ ವಿಜೇತ ತಂಡವನ್ನು ನಿಯೋಜಿಸಲಾಗುತ್ತದೆ. |

ವೈಎಸ್‌ಡಿ-ಸಿಡಿಎನ್/135/2024

(ಸಿದ್ದರಾಮಯ್ಯ)
ಮುಖ್ಯಮಂತ್ರಿ

ಅನುಬಂಧ-1

## ರಾಜ್ಯದಲ್ಲಿರುವ ಯುವಕ ಸಂಘ ಹಾಗೂ ಯುವತಿ ಮಂಡಳಿಗಳು ಮತ್ತು ಕಾರ್ಯನಿರ್ವಹಣೆ ಮಾಡುತ್ತಿರುವ ಯುವಕ ಸಂಘ ಹಾಗೂ ಯುವತಿ ಮಂಡಳಿಗಳ ವಿವರ

| ಕ್ರಸಂ | ಜಿಲ್ಲೆ | ಯುವಕ/ಯುವತಿ ಸಂಘಗಳ ಸಂಖ್ಯೆ | ಕಾರ್ಯನಿರ್ವಹಣೆ ಮಾಡುತ್ತಿರುವ ಯುವಕ/ಯುವತಿ ಸಂಘಗಳ ಸಂಖ್ಯೆ |
|---|---|---|---|
| 1 | ಬಾಗಲಕೋಟೆ | 312 | 40 |
| 2 | ಬಳ್ಳಾರಿ | 89 | 50 |
| 3 | ವಿಜಯನಗರ | | |
| 4 | ಬೆಳಗಾವಿ | 247 | 26 |
| 5 | ಬೆಂಗಳೂರು ನಗರ | 59 | 26 |
| 6 | ಬೆಂಗಳೂರು ಗ್ರಾಮಾಂತರ | 20 | 20 |
| 7 | ಬೀದರ್ | 108 | 91 |
| 8 | ಚಾಮರಾಜನಗರ | 165 | 65 |
| 9 | ಚಿಕ್ಕಬಳ್ಳಾಪುರ | 54 | 25 |
| 10 | ಚಿಕ್ಕಮಗಳೂರು | 131 | 45 |
| 11 | ಚಿತ್ರದುರ್ಗ | 99 | 72 |
| 12 | ದಕ್ಷಿಣ ಕನ್ನಡ | 350 | 41 |
| 13 | ದಾವಣಗೆರೆ | 46 | 4 |
| 14 | ಧಾರವಾಡ | 196 | 42 |
| 15 | ಗದಗ | 328 | 55 |
| 16 | ಹಾಸನ | 100 | 5 |
| 17 | ಹಾವೇರಿ | 125 | 125 |
| 18 | ಕಲಬುರಗಿ | 400 | 100 |
| 19 | ಕೊಡಗು | 173 | 5 |
| 20 | ಕೋಲಾರ | 121 | 13 |
| 21 | ಕೊಪ್ಪಳ | 252 | 214 |
| 22 | ಮಂಡ್ಯ | 92 | 0 |
| 23 | ಮೈಸೂರು | 200 | 17 |
| 24 | ರಾಯಚೂರು | 54 | 2 |
| 25 | ರಾಮನಗರ | 505 | 12 |
| 26 | ಶಿವಮೊಗ್ಗ | 152 | 58 |
| 27 | ತುಮಕೂರು | 73 | 68 |
| 28 | ಉಡುಪಿ | 155 | 75 |
| 29 | ಉತ್ತರ ಕನ್ನಡ | 164 | 0 |
| 30 | ವಿಜಯಪುರ | 19 | 19 |
| 31 | ಯಾದಗಿರಿ | 107 | 15 |
| ಒಟ್ಟು | | **4896** | **1330** |